


# ಪರ್ವತ ಕುವರ

■ ಪ್ರವೀಣ ಕುಲಕರ್ಣಿ

ಅಂತಿಂಥ ಹುಡುಗ ಈತನಲ್ಲ. ಈತನಂತಹ ಹುಡುಗ ಜಗದಲ್ಲಿ ಬೇರೆ ಇಲ್ಲ. ನೇಪಾಳದ ಈ ಹುಡುಗನನ್ನು 'ಪರ್ವತ ಕುವರ' ಎಂದೇ ಕರೆಯಬಹುದೇನೋ. ಹೇಳಿ ಕೇಳಿ ಹಿಮಾಲಯದ ಗಿರಿಶ್ರೇಣಿಗಳಲ್ಲಿ ಆಡಿ ಬೆಳೆದ ಈ ಹುಡುಗ, 'ಎಂಟು ಸಹಸ್ರಗಳು' ಎಂದು ಕರೆಯಿಸಿಕೊಳ್ಳುವ ಜಗತ್ತಿನ ಅತ್ಯಂತ ಎತ್ತರದ ಹದಿನಾಲ್ಕು ಪರ್ವತಗಳ ಪೈಕಿ ಹದಿಮೂರು ಪರ್ವತಗಳನ್ನು ಏರಿ ಸಾಹಸ ಮೆರೆದಿದ್ದಾನೆ. ಈಗಷ್ಟೇ ಹದಿನೆಂಟರ ಹರೆಯದ ಈತನ ಹೆಸರು ನಿಮಾ ರಿಂಜಿ ಶೆರ್ಪಾ ಎಂದು. ವಿಸ್ಮಯಕಾರಿ ಸಾಧನೆಯ ಹೊಸ್ತಿಲಲ್ಲಿರುವ ನಿಮಾನಿಗೆ ಪರ್ವತಗಳೆಂದರೆ ಪಂಚಪ್ರಾಣ. ಎಂಟು ಸಾವಿರ ಮೀಟರ್‌ಗಿಂತ (26,247 ಅಡಿ) ಅಧಿಕ ಎತ್ತರದ ಎಲ್ಲ ಪರ್ವತಗಳನ್ನೂ ಏರುವ ಮಹತ್ವಾಕಾಂಕ್ಷೆಯಿಂದ ಹೆಜ್ಜೆ ಹಾಕಿದ ಈ ಹುಡುಗ, ಈಗ ಟಿಬೆಟ್‌ನಲ್ಲಿರುವ ಶಿಶಾಪಂಗ್ಮಾ ಪರ್ವತದತ್ತ ಕಣ್ಣು ನೆಟ್ಟಿದ್ದಾನೆ.

ಜಗತ್ತಿನ ಅತೀ ಎತ್ತರದ ಹಲವು ಪರ್ವತಗಳನ್ನು ಏರಿರುವ ಈ ಹುಡುಗ ಹೊಸ ಪೀಳಿಗೆಯ ಪಾಲಿಗೆ ಪ್ರೇರಣಾಶಕ್ತಿ ಆಗಿದ್ದಾನೆ. ಪರ್ವತಾರೋಹಣದ ಕುರಿತು ಹೊಸ ತಲೆಮಾರು ಬೆರಗುಗಣ್ಣಿನಿಂದ ನೋಡುವಂತೆಯೂ ಮಾಡಿದ್ದಾನೆ. ಶಿಶಾಪಂಗ್ಮಾ ಶ್ರೇಣಿಯ ನೆತ್ತಿಯವರೆಗೆ ಹೋಗಲು ಆತನಿಗೆ ಚೀನಾ ದೇಶದ ಪರವಾನಗಿ ಬೇಕಿದೆ. ಆತನಿಗೆ ಒಂದುವೇಳೆ ಪರವಾನಗಿ ಸಿಕ್ಕಲ್ಲಿ ಜಗತ್ತಿನ ಎಲ್ಲ ಎತ್ತರದ ಪರ್ವತಗಳನ್ನು ಏರಿದ ಅತ್ಯಂತ ಕಿರಿಯ ವಯಸ್ಸಿನ ಪರ್ವತಾರೋಹಿ ಎಂಬ ಹಿರಿಮೆಗೆ ಪಾತ್ರವಾಗಲಿದ್ದಾನೆ.

'ಎಂಟು ಸಹಸ್ರಗಳು' ಪರ್ವತಗಳನ್ನೆಲ್ಲ ಮೊದಲ ಸಲ ಯಶಸ್ವಿಯಾಗಿ ಏರಿ ಸಾಧನೆ ಮೆರೆದವರು ಇಟಲಿಯ ಪರ್ವತಾರೋಹಿ ರೈನ್‌ಹೋಲ್ಡ್ ಮೆಸ್ನರ್. 1986ರಲ್ಲಿ ಅವರು ಈ ಸಾಧನೆ ಮಾಡಿದ ಬಳಿಕ ಇಲ್ಲಿಯವರೆಗೆ ಅವರ ಹೆಜ್ಜೆಗುರುತುಗಳನ್ನು ಅಷ್ಟೇ ಯಶಸ್ವಿಯಾಗಿ ಅನುಸರಿಸಿದ್ದು ಬರೀ 40 ಮಂದಿ. ಹಲವು ಪರ್ವತಾರೋಹಿಗಳು ಈ ಸಾಧನೆ ಮಾಡಲು ಹೋಗಿ ಅವರೋಹಣ ಮಾಡುವಾಗಲೇ ಅಸುನೀಗಿದ ಉದಾಹರಣೆಗಳೂ ಇವೆ. ಈ ಎತ್ತರದ ಪರ್ವತಗಳು ನೇಪಾಳ, ಚೀನಾ, ಭಾರತ ಮತ್ತು ಪಾಕಿಸ್ತಾನದಲ್ಲಿ ಹರಡಿಕೊಂಡಿವೆ. ಈ ಪರ್ವತಗಳನ್ನು ಏರುವುದು ಅಷ್ಟೊಂದು ಸಲೀಸಲ್ಲ. ಆಮ್ಲಜನಕದ ಪ್ರಮಾಣ ತುಂಬಾ ವಿರಳವಾಗಿರುವ 'ಸಾವಿನ ವಲಯ'ಗಳನ್ನು ದಾಟಿಕೊಂಡು ಹೋಗಬೇಕು.

'ಪರ್ವತ ಏರುವಾಗ ಸಾವು ಯಾವ ಕ್ಷಣವಾದರೂ ನಮ್ಮನ್ನು ಅಪ್ಪಿಕೊಳ್ಳಬಹುದು. ಇದರಿಂದ ನಮ್ಮ ಬದುಕು ಎಷ್ಟು ಮುಖ್ಯ ಎನ್ನುವುದು ಏರುಗತಿಯಲ್ಲಿ ಹಾಕುವ ಪ್ರತಿ ಹೆಜ್ಜೆಯಲ್ಲೂ ವ್ಯಕ್ತವಾಗುತ್ತದೆ' ಎನ್ನುತ್ತಾನೆ ನಿಮಾ. 'ಬೃಹದಾಕಾರವಾದ ಈ ಬೆಟ್ಟಗಳು ನಮಗೆ ಏನು ಕಲಿಸುತ್ತವೆ ಗೊತ್ತೆ? ಶಾಂತವಾಗಿರು ಎಂಬುದನ್ನು. ಬೆಟ್ಟದಲ್ಲಿ ಹೋಗುವಾಗ ಹಿಮಪಾತವಾದಾಗ, ಕೆಟ್ಟ ಹವಾಮಾನ ಕಾಡಿದಾಗ ನಾನು ಎಂದಿಗೂ ಆತುರ ಮಾಡುವುದಿಲ್ಲ. ತಾಳ್ಮೆಯನ್ನು ಕಳೆದುಕೊಳ್ಳುವುದಿಲ್ಲ. ಈ ಶಾಂತತೆಯನ್ನು ಪರ್ವತಗಳೇ ನನಗೆ ದಯಪಾಲಿಸಿವೆ' ಎಂದು ಹೇಳುತ್ತಾನೆ. ಪರ್ವತದ ಕಂದರೆನಿಸಿದ ಶೆರ್ಪಾ ಸಮುದಾಯದಲ್ಲಿ ಜನಿಸಿದ ನಿಮಾನಿಗೆ ಪರ್ವತದ ದುರ್ಗಮ ದಾರಿಗಳು ಅಪರಿಚಿತವೇನಲ್ಲ. ಅಂತಹ ತಾಣಗಳಲ್ಲೇ ಆಡಿ ಬೆಳೆದವನು. ನಿಮಾನ ಚಿಕ್ಕಪ್ಪ ಮಿಂಗ್ಮಾ ಗ್ಯಾಬು 'ಡೆವಿಡ್' ಶೆರ್ಪಾ 2019ರಲ್ಲಿ 'ಎಂಟು ಸಹಸ್ರಗಳು' ಪರ್ವತಗಳನ್ನೆಲ್ಲ ಏರಿದ್ದರು. ಆಗ ಅವರಿಗೆ 30 ವರ್ಷಗಳಾಗಿದ್ದವು. ಎಲ್ಲ ಎತ್ತರದ ಪರ್ವತಗಳನ್ನು ಏರಿದ ಅತ್ಯಂತ ಕಿರಿಯ ಎಂಬ ದಾಖಲೆ ಈಗಲೂ ಅವರ ಹೆಸರಿನಲ್ಲೇ ಇದೆ.

ನಿಮಾನ ತಂದೆ ತಷಿ ಶೆರ್ಪಾ, ಒಂದುಕಾಲಕ್ಕೆ ಪರ್ವತಗಳಲ್ಲೇ ಯಾಕ್‌ಗಳ ಮಂದೆಯನ್ನು ಮೇಯಲು ಕರೆದೊಯ್ಯುವ ಕೆಲಸದಲ್ಲಿ ತೊಡಗಿದವರು. ಈಗ ಶೆರ್ಪಾ ಸಹೋದರರು ಜಗತ್ತಿನ ದೊಡ್ಡ ಪರ್ವತಾರೋಹಣ ಕಂಪನಿಗಳಲ್ಲಿ ಒಂದಾದ ಸೆವೆನ್ ಸಮ್ಮಿಟ್ ಟ್ರೆಕ್ಸ್‌ಅನ್ನು ಸ್ಥಾಪಿಸಿದವರು. 'ಹೌದು, ದೊಡ್ಡ ಹಿನ್ನೆಲೆಯುಳ್ಳ ಕುಟುಂಬ ನನ್ನದು. ಆದರೆ, ಬೆಟ್ಟ–ಗುಡ್ಡಗಳಲ್ಲಿ ನಾನು ನಡೆಸಿದ ಚಾರಣವು ಬದುಕಿನ ಅರ್ಥವನ್ನು ನನಗೆ ಗಾಢವಾಗಿ ಕಟ್ಟಿಕೊಟ್ಟಿದೆ' ಎಂದು ನಿಮಾ ಹೇಳುತ್ತಾನೆ.

ಮೊದಮೊದಲು ಫುಟ್‌ಬಾಲ್ ಪ್ರಿಯನಾಗಿದ್ದ ಈ ಪರ್ವತಾರೋಹಿ, ಫೋಟೊಗ್ರಫಿಯಲ್ಲೂ ವಿಶೇಷ ಆಸಕ್ತಿ ಬೆಳೆಸಿಕೊಂಡಿದ್ದಾನೆ. ಪರ್ವತಗಳಿಗೆ ಈತ ಆರಂಭದ ದಿನಗಳಲ್ಲಿ ಕ್ಯಾಮೆರಾ ಹಿಡಿದೇ ಹೋಗುತ್ತಿದ್ದ. ಬರುಬರುತ್ತಾ ಪರ್ವತಾರೋಹಣದ ಆಸಕ್ತಿ ಹೆಚ್ಚಿದ ಮೇಲೆ ಕೊರಳಲ್ಲಿನ ಕ್ಯಾಮೆರಾ ಮನೆಯಲ್ಲೇ ಉಳಿಯತೊಡಗಿತು. ಪರ್ವತಗಳಿಂದ ದೂರ ಇದ್ದ ದಿನಗಳಲ್ಲಿ ಈ ಹುಡುಗ, ನಿತ್ಯವೂ ತಪ್ಪದೇ ದೈಹಿಕ ಕಸರತ್ತು ಮಾಡುತ್ತಾನಂತೆ. ಜಂಕ್ ಫುಡ್‌ನಿಂದ ದೂರ ಇರುವುದಾಗಿಯೂ ಹೇಳುತ್ತಾನೆ.

ಹಿಮಾಲಯದಲ್ಲಿ ಚಾರಣ ಮಾಡುವವರಿಗೆ ಶೆರ್ಪಾ ಕುಟುಂಬ ಗೈಡ್ ಆಗಿ ಕೆಲಸ ಮಾಡುತ್ತದೆ. ಆಹಾರ, ಹಗ್ಗ, ಏಣಿ ಹಾಗೂ ಇತರ ಸಲಕರಣೆಗಳನ್ನು ಹೊತ್ತೊಯ್ಯುವ ಕೆಲಸವನ್ನೂ ಈ ಕುಟುಂಬ ಮಾಡುತ್ತದೆ. ಈ ಸೇವೆಗಾಗಿ ಶುಲ್ಕವನ್ನೂ ಪಡೆಯುತ್ತದೆ. ಪರ್ವತಾರೋಹಣ ಪ್ರವಾಸೋದ್ಯಮದಲ್ಲಿ ಭವಿಷ್ಯವಿದೆ ಎಂದು ಶೆರ್ಪಾ ಕುಟುಂಬ ನಂಬಿದೆ. ನಿಮಾನ ಹೀರೊ ಎಂದರೆ, ಮೊತ್ತಮೊದಲ ಸಲ ಮೌಂಟ್ ಎವರೆಸ್ಟ್ ಅನ್ನು ತೇಂಜಿಂಗ್ ನೊರ್ಗೆ ಶೆರ್ಪಾ ಅವರಂತೆ. ಈಗ ಯುವ ಪೀಳಿಗೆಯ ದೃಷ್ಟಿಯಲ್ಲಿ ತಾನೇ ಹೀರೊ ಆಗಿ ಬೆಳೆದಿದ್ದಾನೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65